## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.7623/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21.4.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:-** ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗ್ರಾಮದಲ್ಲಿನ ಖಾತೆ ನಂ.99/138 ಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ವಿ.ಸೂರ್ಯನಾರಾಯಣರಾವ್, ಬಿ.ವಿ.ನಾಗೇಂದ್ರ ಮೂರ್ತಿ ಮತ್ತು ಬಿ.ವಿ.ನರಸಿಂಹಮೂರ್ತಿ ಎನ್ನುವವರ ಹೆಸರಿನಲ್ಲಿ ಅಕ್ರಮವಾಗಿ ಮಾಡಿರುವ ಜಂಟಿ ಖಾತೆಯನ್ನು ರದ್ದುಗೊಳಿಸಿ ಪುನ: ಶ್ರೀ ತಾರಕಾನಂದ ಆಶ್ರಮದ ಹೆಸರಿನಲ್ಲಿ ನಮೂದಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಬಿ.ಎನ್.ಲಕ್ಷ್ಮೀಪ್ರಸನ್ನ, ರಾಘವೇಂದ್ರ ನಗರ, ತುಮಕೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಆನಂದಕುಮಾರ್,ಕಾರ್ಯದರ್ಶಿ,ಚಿನ್ನೇನಹಳ್ಳಿ ಗ್ರಾಮಪಂಚಾಯತಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗ್ರಾಮದಲ್ಲಿ 300 ವರ್ಷಗಳ ಹಳೆಯದಾದ ಶ್ರೀ ತಾರಕಾನಂದ ಆಶ್ರಮವಿದ್ದು, ಅಲ್ಲಿ ಖಾತೆ ನಂ.99/138 ಅಂತ ಖಾಲಿ ನಿವೇಶನವಿದ್ದು 2012-13ನೇ ಸಾಲಿನವರೆಗೆ ಆಶ್ರಮಕ್ಕೆ ಸೇರಿದ್ದಾಗಿತ್ತು. ಆದರೆ 2014-15ನೇ ಸಾಲಿನಲ್ಲಿ ಶ್ರೀ ಬಿ.ವಿ.ಸೂರ್ಯನಾರಾಯಣರಾವ್, ಬಿ.ವಿ.ನಾಗೇಂದ್ರ ಮೂರ್ತಿ ಮತ್ತು ಬಿ.ವಿ.ನರಸಿಂಹಮೂರ್ತಿ ಎನ್ನುವವರ ಹೆಸರಿನಲ್ಲಿ ಜಂಟಿ ಖಾತೆ ಆಗಿರುತ್ತದೆ. ಈ ಖಾತೆ ಹೇಗೆ ಆಯಿತು ಎಂದು ಎದುರುದಾರರಿಗೆ ಮಾಹಿತಿ ಹಕ್ಕಿನಲ್ಲಿ ಕೇಳಿದಾಗ ಪಂಚಾಯತಿಯ ದಾಖಲೆಗಳೆಲ್ಲ ಸುಟ್ಟು

ಹೋಗಿವೆಯೆಂದು ಮಾಹಿತಿ ನೀಡಿದ್ದು, ಆದ್ದರಿಂದ ಎದುರುದಾರರು ಅಕ್ರಮವಾಗಿ ಮೇಲ್ಕಂಡ 3 ಜನರ ಹೆಸರಿನಲ್ಲಿ ಖಾತೆ ಮಾಡಿದ್ದಾರೆಂಬ ಅನುಮಾನವಿರುತ್ತದೆ. ಇದನ್ನು ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬ್ರಹ್ಮಸಂದ್ರ ಗ್ರಾಮದಲ್ಲಿ ಶ್ರೀ ತಾರಕಾನಂದ ಮಠವಿದ್ದು, ಇದನ್ನು ವಂಶಪಾರಂಪರ್ಯವಾಗಿ ತಾವೇ ಸೇವಾ ಕಾರ್ಯಗಳನ್ನು ನಿರ್ವಹಿಸಿಕೊಂಡು ಬರುತ್ತಿರುವುದರಿಂದ ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡುವಂತೆ ಬಿ.ವಿ.ಸೂರ್ಯನಾರಾಯಣರಾವ್, ಬಿ.ವಿ.ನಾಗೇಂದ್ರ ಮೂರ್ತಿ ಮತ್ತು ಬಿ.ವಿ.ನರಸಿಂಹಮೂರ್ತಿ ಎನ್ನುವವರು ಅರ್ಜಿ ಸಲ್ಲಿಸಿದ್ದು, ಆ ಆಧಾರದ ಮೇಲೆ ಗ್ರಾಮದಲ್ಲಿ ಪ್ರಕಟಣೆ ಹೊರಡಿಸಿ 30 ದಿನಗಳಲ್ಲಿ ಯಾವುದೇ ತಕರಾರು ಬರದ ಕಾರಣ ಅವರ ಹೆಸರಿನಲ್ಲಿ ಜಂಟಿ ಖಾತೆ ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, 2012-13ನೇ ಸಾಲಿನ ತೆರಿಗೆ ಡಿಮಾಂಡ್ ರಿಜಿಸ್ಟರಿನ ಪ್ರತಿ ಲಭ್ಯವಿದ್ದು, ಇದರಲ್ಲಿ ಖಾತೆ ನಂ.120, 122, 138 ಶ್ರೀ ತಾರಕಾನಂದ ಆಶ್ರಮದ ಹೆಸರಿನಲ್ಲಿರುತ್ತವೆ. ಆದರೆ 2014-15ನೇ ಸಾಲಿನ ತೆರಿಗೆ ಬೇಡಿಕೆ ರಿಜಿಸ್ಟರಿನಲ್ಲಿ ಖಾತೆ ನಂ.120 & 122, ಶ್ರೀ ತಾರಕಾನಂದ ಆಶ್ರಮದ ಹೆಸರಿನಲ್ಲಿದ್ದರೆ, 138 ಶ್ರೀ ಬಿ.ವಿ.ಸೂರ್ಯನಾರಾಯಣರಾವ್, ಬಿ.ವಿ.ನಾಗೇಂದ್ರ ಮೂರ್ತಿ ಮತ್ತು ಬಿ.ವಿ.ನರಸಿಂಹಮೂರ್ತಿ ಎನ್ನುವವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ನಮೂದಾಗಿರುವುದು ಕಂಡುಬರುತ್ತದೆ. 2012-13ನೇ ಸಾಲಿನವರೆಗೆ ಎಲ್ಲಾ 3 ಖಾತೆ ನಂಬರುಗಳು ಆಶ್ರಮದ ಹೆಸರಿನಲ್ಲಿದ್ದರೆ 2014-15ನೇ ಸಾಲಿನಲ್ಲಿ ಖಾತೆ ನಂ.138 ಮೇಲ್ಕಾಣಿಸಿದ 3 ಜನರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿರುವುದು ಕಂಡುಬರುತ್ತದೆ. ಈ ರೀತಿ ಖಾತೆ ಬದಲಾವಣೆ ಮಾಡಲು ಯಾವುದೇ ದಾಖಲೆಗಳು ಇರುವುದಿಲ್ಲ. ಆಶ್ರಮದ ಹೆಸರಿನಲ್ಲಿರುವ

ಆಸ್ತಿಯನ್ನು ವ್ಯಕ್ತಿಗಳ ಹೆಸರಿನಲ್ಲಿ ಬದಲಾವಣೆ ಮಾಡಿ, ಎದುರುದಾರರು ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗ್ರಾಮದಲ್ಲಿನ ಖಾತೆ ನಂ.99/138ಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ವಿ.ಸೂರ್ಯನಾರಾಯಣರಾವ್, ಬಿ.ವಿ.ನಾಗೇಂದ್ರ ಮೂರ್ತಿ ಮತ್ತು ಬಿ.ವಿ.ನರಸಿಂಹಮೂರ್ತಿ ಎನ್ನುವವರ ಹೆಸರಿನಲ್ಲಿ ಅಕ್ರಮವಾಗಿ ಮಾಡಿರುವ ಜಂಟಿ ಖಾತೆ ಯನ್ನು ರದ್ದುಗೊಳಿಸಿ ಪುನ: ಶ್ರೀ ತಾರಕಾನಂದ ಆಶ್ರಮದ ಹೆಸರಿನಲ್ಲಿ ನಮೂದಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/4/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

2/4